# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 972

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 24.07.2024

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಮಂಗಳೂರು ನಗರದಲ್ಲಿ ನರ್ಮ್ ಯೋಜನೆ ಅನ್ವಯ ಎಷ್ಟು ಪರ್ಮಿಟ್‌ಗಳನ್ನು ನೀಡಲಾಗಿದೆ; ಎಷ್ಟು ಬಸ್ಸುಗಳು ಪ್ರಸ್ತುತ ಚಾಲನೆಯಲ್ಲಿವೆ; | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಮಂಗಳೂರು ನಗರದಲ್ಲಿ ನರ್ಮ್ ಯೋಜನೆ ಅನ್ವಯ ಮಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ 21 ಪರ್ಮಿಟ್‌ಗಳು (ಪರವಾನಗಿ) ಮಂಜೂರಾಗಿದ್ದು, ಪ್ರಸ್ತುತ 14 ಮಾರ್ಗಗಳಲ್ಲಿ ಬಸ್ಸುಗಳು ಚಾಲನೆಯಲ್ಲಿರುತ್ತವೆ. |
| ಆ | ಮಂಗಳೂರು ನಗರದಲ್ಲಿ ಮಹಿಳೆಯರಿಗಾಗಿ ಶಕ್ತಿ ಯೋಜನೆ ಅನ್ವಯ ಪ್ರಯಾಣಿಸಲು ಬಸ್ಸುಗಳು ಇಲ್ಲದಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ, ವಿವರ ನೀಡುವುದು; | ಸಾರ್ವಜನಿಕರು/ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಂಗಳೂರು ನಗರ ವ್ಯಾಪ್ತಿಯಲ್ಲಿ 39 ನಗರ ಸಾರಿಗೆಗಳಿಂದ 403 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br>ಶಕ್ತಿ ಯೋಜನೆ ಜಾರಿಗೆ ಬಂದ ನಂತರ ನಗರ ಪ್ರದೇಶಗಳಿಗೆ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಜನಪ್ರತಿನಿಧಿಗಳು/ಸಾರ್ವಜನಿಕರು/ ವಿದ್ಯಾರ್ಥಿಗಳಿಂದ ಬೇಡಿಕೆಗಳು ಸ್ವೀಕೃತವಾಗಿದ್ದು, ಬೇಡಿಕೆಯಲ್ಲಿನ ಮಾರ್ಗಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.ಈ ಬಗ್ಗೆ ಪರಿಶೀಲಿಸಿ, ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ | ಮಂಗಳೂರು ನಗರದಲ್ಲಿ ಸರ್ಕಾರಿ ಬಸ್ಸುಗಳು ಸಂಚರಿಸುವಂತಾಗಲು ಸರ್ಕಾರ ಕೈಗೊಂಡಿರುವ ಕ್ರಮವೇನು; | ಮಂಗಳೂರು ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲು ಪರವಾನಗಿಗಳು ಅವಶ್ಯಕವಾಗಿದ್ದು, ಬೇಡಿಕೆಯಿರುವ 40 ಮಾರ್ಗಗಳಲ್ಲಿ 12 ಮಾರ್ಗಗಳ 14 ಪರವಾನಗಿಗಳಿಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆಯಿದ್ದು, ತಡೆಯಾಜ್ಞೆ ತೆರವುಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. 20 ಮಾರ್ಗಗಳಿಗೆ ಪಕ್ಕಾ ಪರವಾನಗಿ ಮಂಜೂರಾತಿ ಬಾಕಿಯಿರುತ್ತದೆ. ಇನ್ನುಳಿದ 08 ಮಾರ್ಗಗಳಿಗೆ ಪರವಾನಗಿ ನೀಡಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.<br>**ನಿಗಮದಿಂದ 2023-24ನೇ ಸಾಲಿನ ಹಿಂದಿನ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಹಾಗೂ 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.** |
| ಈ | ಮಂಗಳೂರು ನಗರದಲ್ಲಿ ಸರ್ಕಾರಿ ಬಸ್ಸುಗಳ ಬೇಡಿಕೆಗೆ ಇಲಾಖೆ ಸ್ಪಂದಿಸದಿರಲು ಕಾರಣವೇನು; (ವಿವರ ನೀಡುವುದು) | |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | **2000 ಚಾಲಕ-ಕಂ-ನಿರ್ವಾಹಕರ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಸದರಿ ಹುದ್ದೆಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯ ಚಾಲ್ತಿಯಲ್ಲಿದ್ದು, ತ್ವರಿತವಾಗಿ ನೇಮಕಾತಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.**<br><br>ಪ್ರಸ್ತುತ ಮಂಗಳೂರು ವಿಭಾಗದಲ್ಲಿ ಚಾಲನಾ ಸಿಬ್ಬಂದಿಗಳ ಕೊರತೆಯಿದ್ದು, ನಿಗಮದಲ್ಲಿ ಚಾಲನಾ ಸಿಬ್ಬಂದಿಯ ನೇರ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ, ಪರವಾನಗಿಗಳು ಮಂಜೂರಾಗಿ, ಸಿಬ್ಬಂದಿ ಸೇರ್ಪಡೆಯಾದ ನಂತರ ಬೇಡಿಕೆ ಇರುವ ಮಾರ್ಗಗಳಲ್ಲಿ ಪರಿಶೀಲಿಸಿ ಹೊಸದಾಗಿ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. |
| ಉ | ಮಹಿಳೆಯರಿಗೆ ಶಕ್ತಿ ಯೋಜನೆ ಅನ್ವಯ ಪ್ರಯಾಣಿಸಲು ಖಾಸಗಿ ಬಸ್ಸುಗಳಲ್ಲಿ ಅವಕಾಶ ನೀಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಬಗ್ಗೆ ಸರ್ಕಾರದ ನಿರ್ಧಾರವೇನು? | ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಖಾಸಗಿ ಬಸ್ಸುಗಳಲ್ಲಿ ಅವಕಾಶ ನೀಡುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. |

ಸಂಖ್ಯೆ: ಟಿಡಿ 153 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-'ಅ'

ಮಂಗಳೂರು ನಗರ ವ್ಯಾಪ್ತಿಯಲ್ಲಿ ಬೇಡಿಕೆಯಿರುವ ಮಾರ್ಗಗಳ ವಿವರ:

| ಕ್ರಸಂ | ಮಾರ್ಗಗಳು |
|---|---|
| 1 | ಸ್ಟೇಟ್‌ಬ್ಯಾಂಕ್-ಡೇರೆಬೈಲು-ಕೊಂಚಾಡಿ-ಲ್ಯಾಂಡ್ ಲಿಂಕ್ಸ್- ಸ್ಟೇಟ್ ಬ್ಯಾಂಕ್-ಡೇರೆಬೈಲು-ಕೊಂಚಾಡಿ-ಅತ್ರಬೈಲು |
| 2 | ಸ್ಟೇಟ್ ಬ್ಯಾಂಕ್-ತೊಕ್ಕೊಟ್ಟು-ಕುಂಪಲ ಕ್ರಾಸ್-ಕುಂಪಲ |
| 3 | ಸ್ಟೇಟ್ ಬ್ಯಾಂಕ್-ತೊಕ್ಕೊಟ್ಟು-ದೇರಳ ಕಟ್ಟೆ- ನಾಟೇಕಲ್- ಮಂಜನಾಡಿ- ಹೂಹಾಕುವ ಕಲ್ಲು- ಇರಾ |
| 4 | ಸ್ಟೇಟ್ ಬ್ಯಾಂಕ್-ತೊಕ್ಕೊಟ್ಟು-ಕುತ್ತಾರು-ಮದಕ-ಎಲ್ಯಾರ್ ಪದವು |
| 5 | ಸ್ಟೇಟ್ ಬ್ಯಾಂಕ್-ಕುಳೂರು-ಕಾವೂರು-ಬಜಪೆ-ಆದ್ಯಪಾಡಿ |
| 6 | ಸ್ಟೇಟ್ ಬ್ಯಾಂಕ್-ಬೊಂದೆಲ್-ಕಾವೂರು |
| 7 | ಸ್ಟೇಟ್ ಬ್ಯಾಂಕ್-ಬೈಕಂಪಾಡಿ-ಜೋಕಟ್ಟೆ- ಪೋರ್ಕೋಡಿ |
| 8 | ಸ್ಟೇಟ್ ಬ್ಯಾಂಕ್- ಮಲ್ಲಿಕಟ್ಟೆ-ನಂತೂರು-ನೀರು ಮಾರ್ಗ-ಒಳಚ್ಚಿಲ್ ಪದವು |
| 9 | ಸ್ಟೇಟ್ ಬ್ಯಾಂಕ್-ಕುದ್ರೋಳಿ-ಲೇಡಿಹಿಲ್-ಬಿಜೈ-ಕದ್ರಿ ಕಂಬಳ- ಕದ್ರಿ- ಮಲ್ಲಿಕಟ್ಟೆ- ಬೆಂದೂರ್ ವೆಲ್- ಮಂಗಳಾ ದೇವಿ-ಲೀವೆಲ್-ಬೋಳಾರ್-ಪಾಂಡೇಶ್ವರ-ಸ್ಟೇಟ್ ಬ್ಯಾಂಕ್ |
| 10 | ಸ್ಟೇಟ್ ಬ್ಯಾಂಕ್- ವಿಶ್ವ ಭವನ-ಪಿವಿಎಸ್-ಕೆ ಎಸ್ ಆರ್ ಟಿ ಸಿ- ಕುಂಟಿಕಾನ-ದೇರೆ ಬೈಲು- ಆಕಾಶ ಭವನ |
| 11 | ಸ್ಟೇಟ್ ಬ್ಯಾಂಕ್- ವಿಶ್ವ ಭವನ-ಪಿವಿಎಸ್-ಮಣ್ಣ ಗುಡ್ಡ-ಮಾರಿ ಗುಡಿ- ಅಶೋಕ ನಗರ- ಶೇಡಿಗುರಿ |
| 12 | ಸ್ಟೇಟ್ ಬ್ಯಾಂಕ್-ಅತ್ತಾವರ-ಕೋಟಿಚನ್ನಯ್ಯ ಸರ್ಕಲ್- ಕಂಕನಾಡಿ-ಪಂಪ್ ವೆಲ್ ನಾಗುರಿ-ಅಳಪೆ-ಪಡೀಲ್-ಕೆಂಬಾರ್-ಮರೋಳಿ-ಬಿರ್ಕನ ಕಟ್ಟೆ-ಬಂಟ್ಸ ಹಾಸ್ಟೆಲ್-ಸ್ಟೇಟ್ ಬ್ಯಾಂಕ್ |
| 13 | ಸ್ಟೇಟ್ ಬ್ಯಾಂಕ್ - ತೊಕ್ಕೊಟ್ಟು- ಕೋಟೆಕಾರ್- ಮುಡಿಪು |
| 14 | ಸ್ಟೇಟ್ ಬ್ಯಾಂಕ್ - ತೊಕ್ಕೊಟ್ಟು- ದೇರಳಕಟ್ಟೆ- ಮಜನಾಡಿ-ಮುಡಿಪು |
| 15 | ಮುಡಿಪು- ದೇರಳಕಟ್ಟೆ- ಕಂಕನಾಡಿ- ಕೊಟ್ಟಾರಚೌಕಿ-ಎನ್ಐಟಿಕೆ |
| 16 | ಸ್ಟೇಟ್ ಬ್ಯಾಂಕ್ - ಗುರುಪುರ- ಎಡಪದವು-ಮೂಡಬಿದ್ರೆ |
| 17 | ಸ್ಟೇಟ್ ಬ್ಯಾಂಕ್ - ಬಜ್ಪೆ- ಕಿನ್ನಿಗೋಳಿ-ಮೂಡಬಿದ್ರೆ |
| 18 | ಸ್ಟೇಟ್ ಬ್ಯಾಂಕ್ - ಕುಲಶೇಖರ- ಕೈಕಂಬಪೊಳಲಿ |
| 19 | ಮಂಗಳಾದೇವಿ- ನಂತೂರು- ಲಾಲ್‌ಬಾಗ್-ಎಂಆರ್‌ಪಿಎಲ್ |
| 20 | ತಲಪಾಡಿ- ತೊಕ್ಕೊಟ್ಟು- ಲಾಲ್‌ಬಾಗ್- ಬಜ್ಪೆ |
| 21 | ಸ್ಟೇಟ್ ಬ್ಯಾಂಕ್ - ತೊಕ್ಕೊಟ್ಟು -ದೇರಳಕಟ್ಟೆಮದಕ |
| 22 | ಸ್ಟೇಟ್ ಬ್ಯಾಂಕ್ - ಲಾಲ್‌ಬಾಗ್- ಕಿನ್ನಿಗೋಳಿ- ಕಟೀಲು |
| 23 | ಮಂಗಳಾದೇವಿ- ಕಂಕನಾಡಿ- ಕೂಳೂರು- ಕಾಟಿಪಳ್ಳ- ಕಿನ್ನಿಗೊಳಿ |
| 24 | ಮೂಡುಶೆಡ್ಡೆ- ವಾಮಂಜೂರು- ಕಂಕನಾಡಿ- ಉಳ್ಳಾಲಸೋಮೇಶ್ವರ |
| 25 | ಬಜ್ಪೆ- ಕಾವೂರು- ಲಾಲ್‌ಬಾಗ್- ತೊಕ್ಕೊಟ್ಟುಉಳ್ಳಾಲ- ಕೋಟೆಪುರ |
| 26 | ತಲಪಾಡಿ- ಪಂಪ್‌ವೆಲ್- ಕೆ.ಪಿ.ಟಿ- ಬೈಕಂಪಾಡಿಸುರತ್ಕಲ್ |
| 27 | ಮಂಗಳೂರು- ಕಂಕನಾಡಿ- ತೊಕ್ಕೊಟ್ಟು-ಕುಂಪಲ |
| 28 | ಮಂಗಳೂರು- ಕೆ.ಪಿ.ಟಿ. ಬೊಂದೆಲ್-ಕೃಷ್ಣನಗರ |
| 29 | ಮಂಗಳೂರು- ಸುರತ್ಕಲ್-ಒಲವಿನಗುಡ್ಡೆಕಟೀಲು |
| 30 | ಮಂಗಳೂರು- ಬೈಕಂಪಾಡಿ- ಕೆ.ಪಿ.ಟಿ- ಕಂಕನಾಡಿ- ಪಡೀಲ್-ಸುರತ್ಕಲ್-ಪರಂಗಿಪೇಟೆ |
| 31 | ಮಂಗಳೂರು- ಪಡೀಲ್- ಕಂಕನಾಡಿ- ಕೆಪಿಟಿ- ಬೈಕಂಪಾಡಿಪರಂಗಿಪೇಟೆ-ಸುರತ್ಕಲ್ |
| 32 | ಮಂಗಳೂರು- ವಾಮಂಜೂರು ಕೈಕಂಬಮೂಡಬಿದ್ರೆ-ಕಾರ್ಕಳ |
| 33 | ಸ್ಟೇಟ್‌ಬ್ಯಾಂಕ್-ನಂತೂರು-ನೀರಮಾರ್ಗ |
| 34 | ಸ್ಟೇಟ್‌ಬ್ಯಾಂಕ್-ದೇರಳಕಟ್ಟೆ-ಮುಡಿಪು-ಇರಾ |
| 35 | ಸ್ಟೇಟ್‌ಬ್ಯಾಂಕ್-ದೇರಳಕಟ್ಟೆ-ಮುಡಿಪು-ಬೊಳಿಯಾರ್ |
| 36 | ಗಣೇಶಪುರ-ಸುರತ್ಕಲ್-ಉರ್ವ-ಕೆ.ಎಸ್.ಆರ್.ಟಿ.ಸಿ-ಮಂಗಳಾದೇವಿ |
| 37 | ಕೈಕಂಬ-ಸುರತ್ಕಲ್-ಉರ್ವ-ಕೆ.ಎಸ್.ಆರ್.ಟಿ.ಸಿ-ಮಂಗಳಾದೇವಿ |
| 38 | ಸ್ಟೇಟ್‌ಬ್ಯಾಂಕ್-ಕೆ.ಎಸ್.ಆರ್.ಟಿ.ಸಿ-ಬೊಂದೇಲ್ |
| 39 | ಸ್ಟೇಟ್‌ಬ್ಯಾಂಕ್-ಆಕಾಶಭವನ |
| 40 | ಸ್ಟೇಟ್‌ಬ್ಯಾಂಕ್-ಕಾವೂರ-ಬೊಂದೇಲ್ |



Generated from eOffice by Ravi Gothe, TD-TDI-JAI/C(RG), JUNIOR ASSISTANT, Trans on 24/07/2024 12:18 PM